ಸಣ್ಣ ಕೈಗಾರಿಕೆ ಉತ್ತೇಜಿಸುವುದು

1162(876); ಶ್ರೀ ಬಣಕಾರ್ ಯು.ಬಿ. (ಹಿರೇಕೆರೂರು)

ಅ) ಸಣ್ಣ ಕೈಗಾರಿಕೆಗಳನ್ನು ಉತ್ತೇಜಿಸಲು ಹಾವೇರಿ ಜಿಲ್ಲೆಯಲ್ಲಿ ಹಾಕಿಕೊಂಡಿರುವ ಕಾರ್ಯಕ್ರಮಗಳೇನು? (ವಿವರ ನೀಡುವುದು)

ಶ್ರೀ ಸತೀಶ್ ಜಾರಕಿಹೊಳಿ (ಮಾನ್ಯ ಸಣ್ಣ ಕೈಗಾರಿಕೆಗಳ ಸಚಿವರು)

ಅ) ಸರ್ಕಾರವು ರಾಜ್ಯದಲ್ಲಿ ಕೈಗಾರಿಕೆಗಳ ಸಮಗ್ರ ಅಭಿವೃದ್ಧಿ ಹಾಗೂ ಬೆಳವಣಿಗೆಯ ದೃಷ್ಟಿಕೋನದಿಂದ ಹೊಸ ಕೈಗಾರಿಕಾ ನೀತಿ 2014–19ನ್ನು ಜಾರಿಗೆ ತಂದಿದ್ದು, ಸದರಿ ನೀತಿಯನ್ವಯ ಅರ್ಹವಿರುವ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ವಿವಿಧ ಸಹಾಯಧನ/ ಪ್ರೋತ್ಸಾಹ / ರಿಯಾಯಿತಿ /ವಿನಾಯಿತಿ ನೀಡಲು ಅವಕಾಶ ಕಲ್ಪಿಸಲಾಗಿದೆ. ವಿವರಗಳು ಈ ಕೆಳಗಿನಂತಿದೆ.

- **ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಪ್ರಮುಖವಾಗಿ ವಿವಿಧ ಪ್ರೋತ್ಸಾಹ ಮತ್ತು ರಿಯಾಯಿತಿಗಳು:**

¬ ಬಂಡವಾಳ ಹೂಡಿಕೆ ಸಹಾಯಧನ

¬ ಬಡ್ಡಿ ಸಹಾಯಧನ

¬ ಮುದ್ರಾಂಕ ಶುಲ್ಕ ವಿನಾಯಿತಿ ಮತ್ತು ನೋಂದಣಿ ಶುಲ್ಕ ರಿಯಾಯಿತಿ

¬ ಪ್ರವೇಶ ತೆರಿಗೆ ವಿನಾಯಿತಿ

¬ ಭೂ ಪರಿವರ್ತನ ಶುಲ್ಕ ಮರುಪಾವತಿ

¬ ತ್ಯಾಜ್ಯ ಸಂಸ್ಕರಣಾ ಘಟಕ ಸ್ಥಾಪನೆಗೆ ಸಹಾಯಧನ.

¬ ವಿದ್ಯುತ್ ತೆರಿಗೆ ವಿನಾಯಿತಿ

¬ ತಾಂತ್ರಿಕ ಉನ್ನತೀಕರಣ ಸಾಲದ ಬಡ್ಡಿ ಸಹಾಯಧನ, ಐ.ಎಸ್.ಒ ಮತ್ತು ಬಿ.ಐ.ಎಸ್. ಪ್ರಮಾಣ ಪತ್ರ, ತಂತ್ರಜ್ಞಾನ ಅಳವಡಿಕೆ,

ತಂತ್ರಜ್ಞಾನ ವ್ಯಾಪಾರ ಇನ್‌ಕ್ಯೂಬೇಷನ್ ಸೆಂಟರ್, ಎಲೆಕ್ಟ್ರಾನಿಕ್ಸ್ ಹಾಗೂ ಪ್ಲಾಸ್ಟಿಕ್ ತ್ಯಾಜ್ಯ ಸಂಸ್ಕರಣೆ

- ¬ ಮಳೆ ನೀರು ಕೊಯ್ಲು / ಸಂರಕ್ಷಣೆ ಸಹಾಯಧನ
- ¬ ಶಕ್ತಿ ಸಂರಕ್ಷಣೆ ಸಹಾಯಧನ
- ¬ ಯೋಜನಾ ವರದಿ ತಯಾರಿಕಾ ವೆಚ್ಚ ಮರುಪಾವತಿ
- ¬ ಪರಿಶಿಷ್ಟ ಜಾತಿ/ಪಂಗಡದವರಿಗೆ ಜಮೀನು /ನಿವೇಶನ ಪಡೆಯಲು ಸಹಾಯಧನ
- ¬ ರಫ್ತು ಆಧಾರಿತ ಕೈಗಾರಿಕೆಗಳಿಗೆ ಉತ್ತೇಜನ

ಎಸ್.ಸಿ, ಎಸ್.ಟಿ, ಮಹಿಳಾ, ಅಲ್ಪ ಸಂಖ್ಯಾತ, ಹಿಂದುಳಿದ, ಮಾಜಿ ಯೋಧರಿಗೆ ಇತರರಿಗಿಂತ ಹೆಚ್ಚಿನ ಪ್ರೋತ್ಸಾಹ / ರಿಯಾಯಿತಿ ನೀಡಲು ಅವಕಾಶ ಕಲ್ಪಿಸಿದೆ.

- ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನಾ ಯೋಜನೆ (ಪಿ.ಎಂ.ಇ.ಜಿ.ಪಿ) ಯೋಜನೆಯು 2008–09ನೇ ಸಾಲಿನಿಂದ ಜಾರಿಯಲ್ಲಿರುತ್ತದೆ. ಸದರಿ ಯೋಜನೆಯಡಿ ಪ್ರಥಮವಾಗಿ ಕೈಗಾರಿಕೆಗಳನ್ನು ಸ್ಥಾಪಿಸಲು ಉದ್ದೇಶಿಸಿರುವ ಉದ್ಯಮಶೀಲರಿಗೆ ಹಾಗೂ ವಿದ್ಯಾವಂತ ನಿರುದ್ಯೋಗಿಗಳಿಗೆ ಸಣ್ಣ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು, ಉದ್ಯೋಗವಕಾಶ ಕಲ್ಪಿಸುವ ದೃಷ್ಟಿಯಿಂದ, ಉತ್ಪಾದನೆ ಚಟುವಟಿಕೆಗೆ ರೂ. 25 ಲಕ್ಷಗಳ ಯೋಜನಾ ವೆಚ್ಚದವರೆಗೂ ಮತ್ತು ಸೇವಾ ಚಟುವಟಿಕೆಗೆ ರೂ. 10 ಲಕ್ಷಗಳ ಯೋಜನಾ ವೆಚ್ಚದವರೆಗೂ ಬ್ಯಾಂಕ್ ಮುಖಾಂತರ ಸಾಲ ಸೌಲಭ್ಯ ಒದಗಿಸಲಾಗುತ್ತಿದೆ. ಸದರಿ ಯೋಜನೆಯಲ್ಲಿ ಶೇ. 15 ರಿಂದ ಶೇ. 35 ರವರೆಗೆ ಸಹಾಯಧನ ಒದಗಿಸಲಾಗುತ್ತಿದೆ.

- ಕರ್ನಾಟಕ ಸ್ವಯಂ ಉದ್ಯೋಗ ಯೋಜನೆ ಜಾರಿಗೆ ತಂದಿದ್ದು, ರಾಜ್ಯಾದ್ಯಂತ ಗ್ರಾಮೀಣ ಪ್ರದೇಶಗಳ ಯುವಜನರಿಗೆ ಮಾತ್ರ ಸೂಕ್ಷ್ಮ ಕೈಗಾರಿಕೆಗಳನ್ನು ಪ್ರಾರಂಭಿಸಲು ಬ್ಯಾಂಕ್ ಮೂಲಕ ರೂ. 10 ಲಕ್ಷಗಳ ಯೋಜನೆವರೆಗೆ ಸಾಲ ಹಾಗೂ ಶೇ.25 ರಿಂದ ಶೇ.35 ರವರೆಗೆ ಸಹಾಯಧನ ಹಾಗೂ ಅರ್ಹ ಬಡ್ಡಿ ಸಹಾಯಧನವನ್ನು ಇಲಾಖೆಯ ಮೂಲಕ ನೀಡಲಾಗುತ್ತಿದೆ.
- ಪರಿಶಿಷ್ಟ ಜಾತಿ / ಪಂಗಡದ ಅಭ್ಯರ್ಥಿಗಳಿಗೆ ಶೇ.60 ರ ಸಹಾಯಧನದಲ್ಲಿ ವಿವಿಧ ಕೈಗಾರಿಕೆ ಸೇವಾ ವಲಯದಲ್ಲಿ ಉದ್ದಿಮೆ ಸ್ಥಾಪಿಸಿದ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯುವವರಿಗೆ ಕಾರ್ಯಕ್ರಮ ಅನುಷ್ಠಾನ
- ಕೇಂದ್ರ ಸರ್ಕಾರದ ಸಾಂಬಾರು ಮಂಡಳಿಯು (Spice Board) ಹಾವೇರಿ ತಾಲ್ಲೂಕು ಕುಳೇನೂರು ಗ್ರಾಮದಲ್ಲಿ ಸ್ಪೈಸ್ ಪಾರ್ಕ್ ಸ್ಥಾಪಿಸಲು 50 ಏಕರೆ ಜಮೀನು ಗುರುತಿಸಿದೆ. ಈ ಸ್ಪೈಸ್ ಪಾರ್ಕ್ ಸ್ಥಾಪನೆಯಾದ ನಂತರ ಸ್ಥಳೀಯ ಸಣ್ಣ ಕೈಗಾರಿಕೆಗಳು ಹಾಗೂ ಕೃಷಿಕರಿಗೆ ಅನುಕೂಲವಾಗುತ್ತದೆ.
- ಜಿಲ್ಲಾ ಕೈಗಾರಿಕಾ ಕೇಂದ್ರವು ಉದ್ಯಮಶೀಲರು, ಉದ್ದಿಮೆಗಳು ಹಾಗೂ ಕೈಗಾರಿಕೆಗಳನ್ನು ಸ್ಥಾಪಿಸಲು ಇಚ್ಛಿಸುವ ಯುವಕ/ ಯುವತಿಯರಿಗೆ ಮಾರ್ಗದರ್ಶನ ನೀಡಲು ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಪ್ರೇರಣಾ ಶಿಬಿರ, ಉದ್ಯಮಶೀಲತಾ ತರಬೇತಿ ಕಾರ್ಯಕ್ರಮ, ಕ್ಲಸ್ಟರ್ ಅಭಿವೃದ್ಧಿ ಯೋಜನೆಗಳ ಕಾರ್ಯಾಗಾರ, ಹೊಸ ಕೈಗಾರಿಕಾ ನೀತಿ 2014–19ರ ಬಗ್ಗೆ ವಿಚಾರ ಸಂಕೀರ್ಣ ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ.